ದಿನಾಂಕಃ 01-08-2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀಸವಾಲುಃ- ಪ್ರತಿವಾದಿ ಪರ ಶ್ರೀ ಎನ್ ಎಸ್ ಪಿ ವಕೀಲರಿಂದ.**

ನಿಪಿ 5 ದಾಖಲೆಯನ್ನು ತಹಶೀಲ್ದಾರ ಇವರಿಂದ ಪಡೆಯಲು ನಾನೇ ಅರ್ಜಿ ಸಲ್ಲಿಸಿರುತ್ತೇನೆ. ಸದರಿ ಪ್ರಮಾಣಪತ್ರವನ್ನು ನನ್ನ ಮಗ ರಾಮು ತೆಗೆಯಿಸಿ ಕೊಟ್ಟಿರುತ್ತಾರೆ. ನಮ್ಮ ಅಡ್ಡ ಹೆಸರು ಪೂಜಾರ ಇರುತ್ತದೆ. ನನ್ನ ಅಡ್ಡ ಹೆಸರು ಚವ್ಹಾಣ ಅಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ಗಿರಿಜವ್ವ ಇವಳ ಮಗನ ಹೆಸರು ರಾಜು ಎಂದರೆ ಸರಿಯಲ್ಲ. ಸಾಕ್ಷಿ ಅವರ ಹೆಸರು ನಿಂಗಪ್ಪ ಎಂದು ನುಡಿಯುತ್ತಾರೆ. ನಾನು ಖಾಯಂ ತರೀಖ ಯಲವಿಗಿ ತಾಂಡಾದಲ್ಲಿ ವಾಸ ಇರುತ್ತೇನೆ. ಪರಮವಾಡಿಯಲ್ಲಿ ವಾಸ ಇರುವುದಿಲ್ಲ. ನಿಪಿ 5 ಪರಮವಾಡಿ ಗ್ರಾಮಕ್ಕೆ ಸಂಬಂಧಿಸಿದ ಕಾಗದಪತ್ರ ಎಂದರೆ ಸರಿ. ನಾನು ನಿಪಿ 5 ನ್ನು ನನ್ನ ಮಗನೊಂದಿಗೆ ಶಾಮೀಲು ಆಗಿ ಸೃಷ್ಟಿಸಿಕೊಂಡು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಗಿರಿಜವ್ವ ಇವರ ಕುಟುಂಬಕ್ಕೆ ಏನೂ ಸಂಬಂಧ ಇಲ್ಲದೇ ಇದ್ದರೂ ಸಹ ನಿಪಿ 5 ನ್ನು ಖೊಟ್ಟಿಯಾಗಿ ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಯಲವಿಗಿ ಗ್ರಾಮದಲ್ಲಿ ತಿಪ್ಪವ್ವ ಎಂಬುವವರು ಸಾಕಷ್ಟು ಜನರು ಇರುತ್ತಾರೆ ಇರಬಹದು. ನಿಪಿ 5 ರಲ್ಲಿ ತಿಪ್ಪವ್ವ ಇವರ ಗಂಡನ ಹೆಸರು ಕಾಣಿಸಿರುವುದಿಲ್ಲ ಎಂದರೆ ಸರಿ. ನಿಪಿ 5 ನನಗಾಗಲೀ,1 ನೇ ಪ್ರತಿವಾದಿಯರಿಗಾಗಲೀ ಸಂಬಂಧಪಟ್ಟಿದ್ದು ಅಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ.ಹೆ.ಕೆ.ಸರಿ.ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು
ಜೆ ಎಮ್ ಎಫ್ ಸಿ, ಶಿಗ್ಗಾಂವ.
(ಸ್ಥಳಃ ಸವಣೂರ).